# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

9

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ     ದಿನಾಂಕ : DATE : 8/10/21

# ಮೋದಿ ಸರ್ಕಾರ್‌ಗೆ 20 ವರ್ಷದ ಹರ್ಷ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಮುಡಿಗೆ ಮತ್ತೊಂದು ಹೆಗ್ಗಳಿಕೆ. ಗುಜರಾತ್ ಮುಖ್ಯಮಂತ್ರಿಯಿಂದ ಹಿಡಿದು, ದೇಶದ ಪ್ರಧಾನಿ ವರೆಗೆ ಸತತವಾಗಿ 20 ವರ್ಷಗಳ ಕಾಲ ಸುದೀರ್ಘವಾಗಿ ಆಡಳಿತ ನಡೆಸಿದ ಹಿರಿಮೆಗೆ ಮೋದಿ ಪಾತ್ರರಾಗಿದ್ದಾರೆ.

2001ರ ಅ.7ರಂದು ಗುಜರಾತ್ ಸಿಎಂ ಆಗಿ ಅಧಿಕಾರ ವಹಿಸಿಕೊಂಡಿದ್ದ ಮೋದಿ ಅವರು, 2014ರ ಮೇ 22 ರಂದು ರಾಜೀನಾಮೆ ನೀಡಿ, ಪ್ರಧಾನಿ ಹುದ್ದೆ ಅಲಂಕರಿಸಿದ್ದರು. ಸದ್ಯ ದೇಶದ ಹಾಲಿ ಪ್ರಧಾನಿಯಾಗಿ ಮುಂದುವರಿದಿದ್ದಾರೆ. ಹೀಗಾಗಿ, ದೇಶದಲ್ಲೇ ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಿ ಸತತವಾಗಿ 20 ವರ್ಷಗಳ ಕಾಲ ಆಡಳಿತ ನಡೆಸಿದ ಕೀರ್ತಿ ಮೋದಿ ಅವರದ್ದಾಗಿದೆ.

20 ವರ್ಷಗಳಿಂದ ಯಾವುದೇ ವಿರಾಮವಿಲ್ಲದೆ ಮೋದಿ, 13 ವರ್ಷ ಗುಜರಾತ್‌ನ ಮುಖ್ಯಮಂತ್ರಿಯಾಗಿ, 7 ವರ್ಷಗಳಿಂದ ಪ್ರಧಾನಿಯಾಗಿ ದೇಶಸೇವೆ ಮಾಡುತ್ತಿದ್ದಾರೆ. ಈ ಕುರಿತು ಟ್ವಿಟರಿನಲ್ಲಿ ಅಭಿನಂದಿಸಿರುವ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ 'ಅ.7, 2001ರಂದು ಮೋದಿ ಅವರು ಗುಜರಾತ್‌ನ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದರು. ಆ ದಿನ ಭಾರತದ ರಾಜಕೀಯ ಇತಿಹಾಸದಲ್ಲಿಯೇ ಮೈಲುಗಲ್ಲು' ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ, 'ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿ 20 ವರ್ಷಗಳಿಂದ ನಿರಂತರ ಜನರ ಸೇವೆ ಮಾಡುತ್ತಿರುವ, ಜಗತ್ತಿನ ಮೊದಲ ನಾಯಕ ನರೇಂದ್ರ ಮೋದಿ' ಎಂದು ಬಣ್ಣಿಸಿದ್ದಾರೆ. ಹಾಗೆಯೇ, ದೇಶಾದ್ಯಂತ ಬಿಜೆಪಿ ನಾಯಕರು, 20 ವರ್ಷದ ಸಂಭ್ರಮಾಚರಣೆ ನಡೆಸಿದ್ದಾರೆ. ಟ್ವಿಟರ್‌ನಲ್ಲೂ ಇದು ಟ್ರೆಂಡ್ ಆಗಿದೆ.




| | |
|---|---|
| 6941 | ಮೋದಿ |
| 6130 | ನೆಹರು |
| 5829 | ಇಂದಿರಾ ಗಾಂಧಿ |
| 3656 | ಮನಮೋಹನ್ ಸಿಂಗ್ |
| 2511 | ಮೊರಾರ್ಜಿ ದೇಸಾಯಿ |
| 2272 | ವಾಜಪೇಯಿ |
| 2229 | ಪಿ.ವಿ.ಎನ್. |
| 1857 | ರಾಜೀವ್ ಗಾಂಧಿ |
| 1062 | ವಿ.ಪಿ. ಸಿಂಗ್ |
| 862 | ಎಚ್.ಡಿ. ದೇವೇಗೌಡ |
| 723 | ಚರಣ್‌ಸಿಂಗ್ |
| 581 | ಲಾಲ್ ಬಹದ್ದೂರ್ ಶಾಸ್ತ್ರಿ |
| 332 | ಐ ಕೆ ಗುಜ್ರಾಲ್ |
| 223 | ಚಂದ್ರಶೇಖರ್ |
| 28 | ಗುಲ್ಜಾರಿಲಾಲ್ ನಂದಾ |

- ಗುಜರಾತ್ ಸಿಎಂನಿಂದ ಹಾಲಿ ಹುದ್ದೆ ತನಕ ಸತತ ಅಧಿಕಾರ
- ಸತತವಾಗಿ 6941 ದಿನಗಳ ಸಿಎಂ-ಪಿಎಂ ಆಗಿ ಆಳ್ವಿಕೆ
- ಜಾಗತಿಕವಾಗಿಯೂ ಸುದೀರ್ಘ ಅಧಿಕಾರ ನಡೆಸಿದ ಹೆಗ್ಗಳಿಕೆ

## ಜಾಗತಿಕ ಮಟ್ಟದಲ್ಲೂ ದೀರ್ಘಾವಧಿ ವರೆಗೆ ಆಡಳಿತದ ಹೆಗ್ಗಳಿಕೆ

**1 ನರೇಂದ್ರ ಮೋದಿ** 2001ರಿಂದ ಸತತ ಅಧಿಕಾರ. ಗುಜರಾತ್ ಸಿಎಂ ಆಗಿ 13 ವರ್ಷ, ಪ್ರಧಾನಿಯಾಗಿ ಏಳು ವರ್ಷ ಅಧಿಕಾರ.

**2 ಬಿಲ್ ಕ್ಲಿಂಟನ್** ಅಮೆರಿಕ ಅಧ್ಯಕ್ಷರಾಗಿದ್ದ ಬಿಲ್ ಕ್ಲಿಂಟನ್ ಗವರ್ನರ್ ಆಗಿ 2 ಅವಧಿ, ಅಧ್ಯಕ್ಷರಾಗಿ 8 ವರ್ಷ. 20 ವರ್ಷ ಅಧಿಕಾರ

**3 ರೂಸ್‌ವೆಲ್ಟ್** ಅಮೆರಿಕದ ಫ್ರಾಂಕ್ಲಿನ್ ರೂಸ್‌ವೆಲ್ಟ್ ಒಮ್ಮೆ ಗವರ್ನರ್, 8 ವರ್ಷ ಅಧ್ಯಕ್ಷರಾಗಿದ್ದರು. 16.3 ವರ್ಷ ಅಧಿಕಾರ.

**4 ಹೆಲ್ಮುಟ್ ಕೋಹ್ಲ್** ಜರ್ಮನಿ ಚಾನ್ಸೆಲರ್ ಆಗಿ ಹೆಲ್ಮಟ್ ಕೋಹ್ಲ್, 16 ವರ್ಷ ಆಡಳಿತ. 1982ರಿಂದ 1998ರ ವರೆಗೆ ಅಧಿಕಾರ.

**5 ಜಾರ್ಜ್ ಬುಷ್** ಅಮೆರಿಕ ಅಧ್ಯಕ್ಷರಾಗಿದ್ದ ಜಾರ್ಜ್ ಡಬ್ಲ್ಯು ಬುಷ್ 14 ವರ್ಷ ಆಳ್ವಿಕೆ. 5 ವರ್ಷ ಗವರ್ನರ್, 8 ವರ್ಷ ಅಧ್ಯಕ್ಷ.

**6 ಫ್ರಾಂಕೋಯಿಸ್** ಫ್ರಾನ್ಸ್‌ನ ಅಧ್ಯಕ್ಷರಾಗಿದ್ದ ಫ್ರಾಂಕೋಯಿಸ್ 1981ರಿಂದ 1995ರ ವರೆಗೆ ಅಧಿಕಾರ. ಒಟ್ಟು ಅವಧಿ 13.11 ವರ್ಷ

**7 ಮಾ. ಥ್ಯಾಚರ್** ಇಂಗ್ಲೆಂಡ್ ಪ್ರಧಾನಿಯಾಗಿ ಸತತ 11.6 ವರ್ಷದ ವರೆಗೆ ಆಡಳಿತ ನಡೆಸಿದ ಕೀರ್ತಿ ಇವರದ್ದು.

**8 ಬರಾಕ್ ಒಬಾಮ** ಅಮೆರಿಕದ ಯಾವುದೇ ರಾಜ್ಯದ ಗವರ್ನರ್ ಆಗದೇ ನೇರವಾಗಿ ಅಧ್ಯಕ್ಷರಾಗಿ 8 ವರ್ಷ ಕಾರ್ಯ ನಿರ್ವಹಣೆ.